# ಶ್ರೀ ರಾಘವೇಂದ್ರ ಗುರುಸ್ತೋತ್ರ

**ವಿದ್ವಾನ್ ಜಿ. ಗುರುವೆಂಕಟಾಚಾರ್ಯ**
-Contributed by Sri Ramanatha B,Bangalore www.vijayadasaru.net Team member

ಸ್ತೋತ್ರ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧವಾದ ಸ್ತೋತ್ರವೆಂದರೆ ಅದು ಶ್ರೀ ಗುರುರಾಘವೇಂದ್ರ ಸ್ತೋತ್ರ. ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ ವಿದ್ಯಾ ಶಿಷ್ಯರು ಶ್ರೀ ಬಿಚ್ಚಾಲಿ ಅಪ್ಪಣಾಚಾರ್ಯರು. ಅವರು ಒಮ್ಮೆ ತಮ್ಮ ಸ್ವಗ್ರಾಮವಾದ ಬಿಚ್ಚಾಲಿಯಲ್ಲಿದ್ದಾಗ ಅವರಿಗೆ ಶ್ರೀ ಗುರುರಾಜರು ಬೃಂದಾವನಸ್ಥರಾಗುವರೆಂಬ ವಿಷಯ ತಿಳಿಯುತ್ತದೆ. ಅನಿರೀಕ್ಷಿತವಾಗಿ ತಿಳಿದು ಬಂದ ಈ ವಾರ್ತೆಯಿಂದ ಅಘಾತಗೊಂಡ ಶ್ರೀ ಅಪ್ಪಣಾಚಾರ್ಯರು ಬಿಚ್ಚಾಲಿಯಿಂದ ಮಂತ್ರಾಲಯಕ್ಕೆ ಧಾವಿಸುತ್ತಾರೆ. ಶ್ರೀ ಗುರುರಾಜರ ದರ್ಶನದಲ್ಲಿ ತದೇಕ ಚಿತ್ತರಾಗಿ ಧಾವಿಸುತ್ತಿರುವಾಗ ಪರವಶರಾದ ಅವರ ಬಾಯಿಯಿಂದ ಈ ಸ್ತೋತ್ರ ಹೊರ ಹೊಮ್ಮಿದೆ ಎಂಬುದು ಐತಿಹ್ಯ. ಬಿಚ್ಚಾಲಿಯಿಂದ ಹೊರಟಾಗ 'ಶ್ರೀ ಪೂರ್ಣಬೋಧ' ಎಂದು ಪ್ರಾರಂಭವಾದ ಈ ಸ್ತೋತ್ರವು ಮಂತ್ರಾಲಯಕ್ಕೆ ಬಂದಾಗ 'ಯೋ ಭಕ್ತ್ಯಾ ಗುರುರಾಘವೇಂದ್ರ' ಎಂಬ ಶ್ಲೋಕದವರೆಗೆ ಬಂದಿತ್ತಂತೆ. ಅಷ್ಟರಲ್ಲಿ ಗುರುರಾಜರು ವೃಂದಾವನಸ್ಥರಾದದ್ದೂ ತಿಳಿಯುತ್ತದೆ. ಅವರು ಮಂತ್ರಾಲಯದಲ್ಲಿ ಶ್ರೀ ಗುರುರಾಜರನ್ನು ಕಾಣುವ ಬದಲು ಅವರ ಬೃಂದಾವನವನ್ನು ಕಾಣುತ್ತಾರೆ. ಮತ್ತಷ್ಟು ದುಃಖವುಂಟಾಗಿ ಯೋ ಭಕ್ತ್ಯಾ ಎಂಬ ಶ್ಲೋಕವು 'ವಿಭೂತಿರತುಲಾ' ಎಂಬಲ್ಲಿ ನಿಂತೇ ಬಿಡುತ್ತದೆ. ಅಪ್ಪಣಾಚಾರ್ಯರ ಹೃದಯ ಕಣ್ಣುಗಳು ತುಂಬಿ ಬಂದು ಮಾತೂ ನಿಲ್ಲುತ್ತದೆ. ಆದರೆ ಅವರ ಸ್ತೋತ್ರವು ಅಪೂರ್ಣವಾಗಲಿಲ್ಲ. ಅಪ್ಪಣಾಚಾರ್ಯರ ವಾಣಿಗೆ ಗುರುರಾಜರು ತಮ್ಮ ವಾಣಿಯನ್ನು ಜೋಡಿಸಿ ಆ ಶ್ಲೋಕವನ್ನು ಪೂರ್ಣಗೊಳಿಸುವ ಉದ್ದೇಶದಿಂದ ವೃಂದಾವನಸ್ಥರಾಗಿದ್ದುಕೊಂಡೇ 'ಸಾಕ್ಷೀ ಹಯಾಸ್ಯೋಽತ್ರ ಹಿ' ಎಂದು ಹೇಳುತ್ತಾರೆ. ಬೃಂದಾವನದಿಂದ ಈ ಧ್ವನಿ ಪ್ರಾದುರ್ಭವಿಸಿದ್ದು ಎಲ್ಲರಿಗೂ ಗೋಚರವಾಗಿದೆ. ಶ್ರೀ ಗುರುರಾಜರಿಂದ ಮುದ್ರೆ ಬಿದ್ದ ಸ್ತೋತ್ರವಿದು ಎಂದು ಆ ಕಾಲದಲ್ಲಿಯೇ ಸರ್ವ ಮಾನ್ಯವಾಗಿ ಅಂದಿನಿಂದ ಇಂದಿನವರೆಗೂ ಬ್ರಾಹ್ಮಣರೂ – ಬ್ರಾಹ್ಮಣೇತರರೂ ಕೂಡ ಅಬಾಲವೃದ್ಧರಾಗಿ ಎಲ್ಲರೂ ಈ ಸ್ತೋತ್ರವನ್ನು ಪಠಿಸುವುದು ರೂಢಿಯಲ್ಲಿದೆ.

ಅಪ್ಪಣಾಚಾರ್ಯರು ಆ ಸ್ತೋತ್ರವನ್ನು ಮುಗಿಸಿದಾಗ ಗುರುರಾಜರು ವೃಂದಾವನದೊಳಗಿದ್ದು ಹಯಗ್ರೀವ ಮಂತ್ರವನ್ನು ಜಪಿಸುತ್ತಿದ್ದರಂತೆ. ಆದ್ದರಿಂದ ಹಯಗ್ರೀವನೇ

ಸಾಕ್ಷಿ ಎಂದರಂತೆ. ಅಂದರೆ ರಾಯರಲ್ಲಿ ಭಕ್ತಿ ಮಾಡಿ ಈ ಸ್ತೋತ್ರವನ್ನು ಪಠಿಸಿದರೆ ಅವರಿಗೆ ಆ ಹರಿಯ ಪ್ರಸಾದ ಉಂಟಾಗಿ ಇಷ್ಟಾರ್ಥ ಸಿದ್ಧಿ ಹಾಗೂ ವಿಪುಲವಾದ ಐಶ್ವರ್ಯ ದೊರೆಯುತ್ತದೆ ಎಂಬ ಮಾತು ಕೇವಲ ಅಪ್ಪಣಾಚಾರ್ಯರಿಗೆ ಮಾತ್ರ ಸಮ್ಮತವಾದ ಮಾತಲ್ಲ, ನನಗೂ ಸಮ್ಮತ ಎಂದು ಶ್ರೀ ಹಯಗ್ರೀವ ದೇವರು ರಾಯರ ಅಂತರಂಗದಲ್ಲಿದ್ದುಕೊಂಡು ನುಡಿದಿದ್ದಾರೆ. ಅದನ್ನರಿತ ರಾಯರು 'ಸಾಕ್ಷೀ ಹಯಾಸ್ಯೋಽತ್ರ ಹಿ' ಎಂದು ಘೋಷಿಸಿದ್ದಾರೆಂದು ಇದರ ಹಿನ್ನಲೆಯಾಗಿದೆ.

ಇದರಿಂದ ಈ ಸ್ತೋತ್ರದಲ್ಲಿ ಹೇಳಲ್ಪಟ್ಟ ಪ್ರತಿಯೊಂದು ವಿಷಯವೂ ಪ್ರಾಮಾಣಿಕವೆಂಬುದರಲ್ಲಿ ಕಿಂಚಿತ್ತು ಸಂದೇಹವಿಲ್ಲ. 'ಶ್ರೀ ಪೂರ್ಣಬೋಧ' ಎಂದು ಪ್ರಾರಂಭದ ಎರಡು ಶ್ಲೋಕಗಳಲ್ಲಿ ಗುರುರಾಜರ ವಾಗ್ಗಂಗೆಯನ್ನು ಬಣ್ಣಿಸಲಾಗಿದೆ. ಗುರುರಾಜರ ಮುಖದಿಂದ ಪ್ರವಹಿಸಿದ ವಾಗ್ಗಂಗೆಯ ವೈಶಿಷ್ಟ್ಯವೆಂದರೆ ಅದು ನೇರವಾಗಿ ಪ್ರವಹಿಸಿ ಶ್ರೀ ಮದಾಚಾರ್ಯರ ಶಾಸ್ತ್ರ ಸಾಗರಕ್ಕೇ ಸೇರುತ್ತದೆ. ಕಾಮಾದಿ ಅರಿಷ್ವಡ್ವರ್ಗಗಳನ್ನು ಗೆದ್ದ ವಿವೇಕಿಗಳ ತಲೆಗೆ ಹಿಡಿಯುವಂತಹುದು ಎಂದು ಮುಂತಾಗಿ ಬಣ್ಣಿಸಿ ಇಂತಹ ವಾಗ್ಗಂಗೆ ನಮ್ಮ ಮಾಲಿನ್ಯವನ್ನು ಪರಿಹರಿಸಲಿ ಎಂದು ಪ್ರಾರ್ಥಿಸಲಾಗಿದೆ. ಅಂದರೆ ಪಂಚಭೇದ ತಾರತಮ್ಯ ಹರಿಸರ್ವೋತ್ತಮದ್ವಾದಿ ಜ್ಞಾನವನ್ನುಂಟು ಮಾಡಿ ಲಿಂಗದೇಹವೆಂಬ ಮಾಲಿನ್ಯವನ್ನು ದೂರೀಕರಿಸಿ ಮೋಕ್ಷವನ್ನು ಸಂಪಾದಿಸಿ ಕೊಡುತ್ತದೆ.

ಶಚೀಪತಿ ಪುರಂದರ ದೇವಲೋಕದ ಇಂದ್ರನಾದರೆ ಗುರುರಾಜರು ಭೂಲೋಕದ ದೇವೇಂದ್ರರಾಗಿದ್ದಾರೆ. ಅವರ ದೃಷ್ಟಿ ನಮ್ಮ ಮೇಲೆ ಬೀಳಬೇಕು. ಅದು ಪಾಪದ ಬೆಟ್ಟವನ್ನು ಭೇದಿಸುವ ವಜ್ರಾಯುಧ ಎಂದು ಮುಂದಿನ ಶ್ಲೋಕದಲ್ಲಿ ಕೇಳಿಕೊಳ್ಳಲಾಗಿದೆ. ಮುಂದಿನ ಶ್ಲೋಕವು ಶ್ರೀ ಗುರುರಾಜರು ಪ್ರಹ್ಲಾದ ರಾಜರಾಗಿದ್ದಾಗ ಮಾಡಿದ ಹರಿಭಜನೆಯ ಫಲವಾಗಿ ಸಮಸ್ತ ಸಂಪತ್ತನ್ನು ಪಡೆದವರು ಎಂದು ಹೇಳುತ್ತದೆ. ಯದ್ಯಪಿ ಗುರುರಾಜರು ಪೂರ್ವಾಶ್ರಮದಲ್ಲಿ ಬಡತನದ ಜೀವನವನ್ನು ನಡೆಯಿಸಿದವರು ಎಂದು ಪ್ರತೀತಿ ಇದೆ. ಆದರೆ ಕೊರತೆಯ ಕೊರಗಿನ ಜೀವನವನ್ನು ನಡೆಯಿಸಿದವರು ಎಂದು ಅದರ ಅರ್ಥವಲ್ಲ. ಕೃಷ್ಣ ಪರಮಾತ್ಮ ಹೇಳಿದಂತೆ ಅತೃಪ್ತಿಯೇ ಬಡತನ ಹೊರತು ಧನಾಭಾವವಲ್ಲ. ವೆಂಕಟಭಟ್ಟರಿಗೆ ಸರಸ್ವತೀಬಾಯಿಯಂತಹ ಪತ್ನಿ, ವೇದಾಂತ ಅಧ್ಯಯನ ಮಾಡಿದ ಲಕ್ಷ್ಮೀನಾರಾಯಣಾಚಾರ್ಯರೆಂಬ ಮಗ, ಸುಧೀಂದ್ರರಂತಹ ಗುರುಗಳು, ಶ್ರೀಮದಾಚಾರ್ಯರ ಶಾಸ್ತ್ರವೆಂಬ ಅಮೂಲ್ಯವಾದ ನಿಧಿ ಇಂತಹ ಸಂಪತ್ತನ್ನು ಪಡೆದು ಸಂತಸದ ಜೀವನವನ್ನು ನಡೆಯಿಸಿದವರು. "ದೇವ ಸ್ವಭಾವೋ ದಿವಿಜದ್ರುಮೋಽಯಮ್" ಎಂದು ಅವರನ್ನು

ವರ್ಣಿಸಿದ್ದಾರೆ. ಅಂದರೆ ನರಸಿಂಹ ದೇವರ ಸ್ವಭಾವದವರು. ನರಸಿಂಹ ದೇವರ ಭಕ್ತನಾದ ಪ್ರಹ್ಲಾದನನ್ನು ಕಾಪಾಡಿದವರು ಮತ್ತು ದುಷ್ಟನಾದ ಹಿರಣ್ಯಕಶಿಪುವನ್ನು ಸಂಹರಿಸಿದವರು. ಅಂತೆಯೇ ಗುರುರಾಜರು ಶಾಪಾನುಗ್ರಹ ಶಕ್ತರು. ಸಜ್ಜನರಿಗೆ ಅನುಗ್ರಹ ಮಾಡಿ ಉದ್ಧರಿಸುವವರು. ದುರ್ಜನರಿಗೆ ಶಾಪ ನೀಡಿ ಅವರನ್ನು ನಿಗ್ರಹಿಸತಕ್ಕವರು ಮತ್ತು ಪ್ರಹ್ಲಾದರಾಜರೇ 'ಸುರತರೋರಿವ ತೇ ಪ್ರಸಾದಃ' ಎಂದು ವರ್ಣಿಸಿದಂತೆ ನರಸಿಂಹ ದೇವರು ತನ್ನ ಪಾದದ ಬುಡಕ್ಕೆ ಬಿದ್ದ ಪ್ರಹ್ಲಾದನನ್ನು ಉದ್ಧರಿಸಿದರು. ತಲೆಯ ಮೇಲೆ ಅಮೃತಮಯ ಹಸ್ತವನ್ನಿಟ್ಟು ಅನುಗ್ರಹಿಸಿದರು. ಅದೇ ಸ್ವಭಾವವನ್ನಳವಡಿಸಿಕೊಂಡು ಗುರುರಾಜರೂ ಕೂಡ ಯಾರೇ ಆಗಲಿ ತಮ್ಮ ಪಾದ ಬುಡಕ್ಕೆ ಬಾಗಿದವರನ್ನು ಉದ್ಧರಿಸುತ್ತಿರುವುದು ಸರ್ವ ಜನ ವಿದಿತ.

ಹೀಗೆ ೨೩ ಶ್ಲೋಕಗಳವರೆಗೆ ಭಾವ ಪೂರ್ಣವಾದ ಶೈಲಿಯಲ್ಲಿ ಗುರುರಾಜರನ್ನು ಸ್ತೋತ್ರ ಮಾಡಿ ಅಭೀಷ್ಟಗಳನ್ನು ಪ್ರಾರ್ಥಿಸಲಾಗಿದೆ. ಮುಂದೆ ೩೩ನೆಯ ಶ್ಲೋಕದ ವರೆವಿಗೆ ಈ ಸ್ತೋತ್ರದ ಫಲಸ್ತುತಿಯೂ ಇದೆ.

೧. ಈ ಸ್ತೋತ್ರದ ಪಾರಾಯಣದಿಂದ ಅತಿ ಶೀಘ್ರದಲ್ಲಿಯೇ ಕುಷ್ಠಾದಿ ರೋಗಗಳ ಪರಿಹಾರವಾಗುತ್ತದೆ. (ಇಲ್ಲಿ ದೇಹಕ್ಕೆ ಸಂಬಂಧಿಸಿದ ಕುಷ್ಠರೋಗವನ್ನು ಮಾತ್ರ ಗ್ರಹಿಸದೆ ಮನಸ್ಸಿಗೆ ಸಂಬಂಧಿಸಿದ ಕುಷ್ಠರೋಗ ಅಂದರೆ ಕುತ್ಸಿತ ವಸ್ತುಗಳಲ್ಲಿ ಅಭಿರುಚಿ ಎಂಬ ರೋಗವೂ ಪರಿಹಾರವಾಗುತ್ತದೆ ಎಂದು ಭಾವಿಸಬೇಕು).

೨. ಅಂಧೋऽಪಿ ದಿವ್ಯದೃಷ್ಟಿಃ ಸ್ಯಾತ್ – ಕುರುಡನಿಗೂ ಕಣ್ಣು ಬರುತ್ತದೆ. ಕೇವಲ ಬಾಹ್ಯ ದೃಷ್ಟಿ ಮಾತ್ರವಲ್ಲದೇ, ಒಳಗಣ್ಣು ಕುರುಡಾದವನಿಗೂ ರಾಯರ ಸ್ತೋತ್ರದಿಂದ ಜ್ಞಾನ ದೃಷ್ಟಿಯಾಗುತ್ತದೆ.

೩. ಏಡ ಮೂಕೋऽಪಿ ವಾಕ್ಪತಿ – ಮೂಕನೂ ಬೃಹಸ್ಪತ್ಯಾಚಾರ್ಯರಂತೆ ವಾಗ್ಮಿಯಾಗುವನು. ಮಾತುಗಾರನೇ ಆಗಿದ್ದರೂ ಶಾಸ್ತ್ರದ ಮಾತಿಲ್ಲದಿದ್ದರೆ ಮೂಕನಂತೆಯೇ ಸರಿ. ಅಂತಹವನೂ ಈ ಸ್ತೋತ್ರ ಪಾರಾಯಣ ಮಾಡಿ ಶಾಸ್ತ್ರದ ಪಾಠ ಪ್ರವಚನ ಸಾಮರ್ಥ್ಯವನ್ನು ಪಡೆಯಬಹುದು ಎಂದರ್ಥ.

೪. ಪೂರ್ಣಾಯುಷ್ಯ ಮತ್ತು ಪೂರ್ಣ ಸಂಪತ್ತು ಈ ಸ್ತೋತ್ರದಿಂದ ದೊರೆಯುತ್ತದೆ. ಈ ಲೋಕದ ಪೂರ್ಣಾಯುಷ್ಯ ಪೂರ್ಣ ಸಂಪತ್ತೆಲ್ಲವೂ ಗೌಣವಾದದ್ದು. ಮುಖ್ಯಾರ್ಥದಲ್ಲಿ ಪೂರ್ಣಾಯುಷ್ಯ ಪೂರ್ಣ ಸಂಪತ್ತೆಂದರೆ ಮೋಕ್ಷ ಎಂದರ್ಥ. ಈ ಸ್ತೋತ್ರ ಜಪದಿಂದ ಗುರುಭಕ್ತಿ

ಉಂಟಾಗಿ ಅದರ ಮೂಲಕ ಬ್ರಹ್ಮಜ್ಞಾನವನ್ನು ಪಡೆದು ಮೋಕ್ಷ ಉಂಟಾಗುತ್ತದೆ ಎಂದು ತಿಳಿಯಬೇಕು.

೫. ಯಃ ಪಿಬೇಜ್ಜಲಮೇತೇನ ಸ್ತೋತ್ರೇಣೈವಾಭಿಮಂತ್ರಿತಮ್ । ತಸ್ಯ ಕುಕ್ಷಿಗತಾ – ದೋಷಾಃ ಸರ್ವೇ ನಶ್ಯಂತಿ ತತ್ಕ್ಷಣಾತ್ ॥

ಈ ಸ್ತೋತ್ರದಿಂದ ನೀರನ್ನು ಅಭಿಮಂತ್ರಿಸಿ ಪ್ರಾಶನ ಮಾಡಿದರೆ ಎಲ್ಲ ರೋಗಗಳೂ ವಾಸಿಯಾಗುತ್ತವೆ. ಇಲ್ಲಿರುವ 'ಏವ' ಎಂಬ ಪದವನ್ನು ಬೇರೆ ಬೇರೆ ಕಡೆ ಅನ್ವಯಿಸಿ ಅನೇಕ ಅರ್ಥವಿಶೇಷಗಳನ್ನು ವಿದ್ವಾಂಸರು ವರ್ಣಿಸಿದ್ದಾರೆ. ಉದಾಹರಣೆಗಾಗಿ ಕೆಲವನ್ನು ಇಲ್ಲಿ ನಿರೂಪಿಸುತ್ತೇನೆ.

(ಅ) ಯಃ ಪಿಬೇದೇವ : ಅಭಿಮಂತ್ರಿಸಿದ ನೀರನ್ನು ಪ್ರಾಶನ ಮಾಡಿದರಷ್ಟೇ ಸಾಕು. ಬೇರೆ ಪಥ್ಯ ಇತ್ಯಾದಿ ಯಾವ ನಿರ್ಬಂಧವೂ ಬೇಕಾಗಿಲ್ಲ. ಬೇರೆ ಔಷಧವನ್ನು ಮಾಡುವಾಗ ಪಥ್ಯದ ನಿರ್ಬಂಧವಿದೆ. ಇದಕ್ಕೆ ಇಲ್ಲ ಎಂಬುದೇ ಇದರ ವೈಶಿಷ್ಟ್ಯ.

ಬೇರೆ ಔಷಧ ಸೇವನೆ ಮಾಡುವವರೂ ಕೂಡ (ಪಿಬೇತ್ ಏವ). ಈ ನೀರನ್ನು ಪ್ರಾಶನ ಮಾಡಲೇಬೇಕು. ಅದರಿಂದ ಶೀಘ್ರ ಫಲಕಾರಿ–ಯಾಗುತ್ತದೆ.

(ಆ) ಏತೇನ ಸ್ತೋತ್ರೇಣೈವ : ರೋಹ ಪರಿಹಾರವಾಗಲು ಧನ್ವಂತರಿ ಮಂತ್ರ ಜಪ ಹೋಮಾದಿಗಳು ಇವೇ ಮೊದಲಾದ ಅನೇಕ ಸಾಧನಗಳಿವೆ. ಆದರೆ ಎಲ್ಲರೂ ಅದಕ್ಕೆ ಅಧಿಕಾರಿಗಳಿರುವುದಿಲ್ಲ. ಅಂತಹ ಅನಧಿಕಾರಿಗಳು ಚಿಂತಿಸಬೇಕಾಗಿಲ್ಲ. ಈ ಸ್ತೋತ್ರದಿಂದಲೇ ಅಭಿಮಂತ್ರಿಸಿದರೆ ಸಾಕು ಎಂಬ ಭಾವವೂ ಇದರಲ್ಲಡಗಿದೆ.

(ಇ) ತತ್ಕ್ಷಣಾದೇವ : ಬೇರೆ ಔಷಧ ಸೇವನೆ ಮಾಡಿದಾಗ ರೋಗವಾಸಿ ಯಾಗುವುದಾದರೂ ವಿಲಂಬವಾಗುತ್ತದೆ. ಆಯಾ ಸಮಯಕ್ಕೆ ಸರಿಯಾಗಿ ಔಷಧ ಸೇವನೆ ಮಾಡಬೇಕು. ಏನಾದರೂ ಹೆಚ್ಚು ಕಡಿಮೆಯಾದರೆ ರೋಗಿ ಸಾಯುತ್ತಾನೆ. ಆದರೆ ಈ ಸ್ತೋತ್ರದಿಂದ ಅಭಿಮಂತ್ರಿತವಾದ ನೀರನ್ನು ಪಾನ ಮಾಡಿದರೆ ತಕ್ಷಣವೇ ರೋಗ ಪರಿಹಾರ. ಹೆಚ್ಚು

ಕಡಿಮೆಯಾದರೂ ಏನೂ ಹಾನಿ ಇಲ್ಲ. Side Effect ಇಲ್ಲ. Dose ಹೆಚ್ಚಾದರೂ ಬಾಧಕವಿಲ್ಲ.

(ಈ) ನಶ್ಯಂತಿ ಏವ : ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಬೇರೆ ಔಷಧೋಪಚಾರ ಮಾಡಿದಾಗ ರೋಗ ವಾಸಿಯಾಗುತ್ತದೆಂಬ ನಿಯಮವಿಲ್ಲ. ಹಣವೂ ಹೋಗುತ್ತದೆ. ಪ್ರಾಣವೂ ಹೋಗುತ್ತದೆ. ಆದರೆ ಇವೆರಡನ್ನೂ ಉಳಿಸುವ ಔಷಧ – ಈ ಸ್ತೋತ್ರದಿಂದ ಅಭಿಮಂತ್ರಿಸಿದ ನೀರು. ಹಣವಿಲ್ಲದೇ ರೋಗ ವಾಸಿಯಾಗುವುದು ಗ್ಯಾರಂಟಿ.

(ಉ) ಸರ್ವೇ ಏವ : ಎಲ್ಲ ರೋಗಗಳೂ ವಾಸಿಯಾಗುತ್ತವೆ. ಒಂದೊಂದು ರೋಗಕ್ಕೆ ಒಂದೊಂದು ಮಾತ್ರೆ, ಒಂದೊಂದು ಚೂರ್ಣ, ಹೊಟ್ಟೆಯೊಳಗೆ ಸೇವಿಸಬಹುದಾದದ್ದು, ಹೊರಗೆ ಮಾತ್ರ ಉಪಯೋಗಿಸಬೇಕಾದದ್ದು ಇಂತಹ ವಿಭಾಗ ಈ ಔಷಧದಲ್ಲಿಲ್ಲ. ಹೊರಗೂ ಒಳಗೂ ಎಲ್ಲ ರೋಗಗಳಿಗೂ ಒಂದೇ ಔಷಧಿ. ಈ ಸೌಲಭ್ಯವಿದೆ.

(ಊ) ಜಲಂ ಏವ : ಈ ಸ್ತೋತ್ರದಿಂದ ಅಭಿಮಂತ್ರಿಸಲು ಆರಿಸಿಕೊಳ್ಳುವ ವಸ್ತು ಬೆಲೆ ಬಾಳುವಂಥಾದ್ದೇನೂ ಆಗಬೇಕಾಗಿಲ್ಲ. ಅಗ್ಗವಾದ ನೀರಾದರೂ ಸರಿ. ಬೆಲೆ ಕಟ್ಟಲಾಗದ ಈ ಸ್ತೋತ್ರದ ಮಹಿಮೆಯಿಂದ ಅಗ್ಗದ ನೀರೂ ಮಹಾಕಾರ್ಯವನ್ನು ಸಾಧಿಸುತ್ತದೆ.

(ಋ) ಈ ಸ್ತೋತ್ರವನ್ನು ಚೆನ್ನಾಗಿ ಭಕ್ತಿಯಿಂದ ಪಠಿಸಿ ಗುರುಗಳ ಬೃಂದಾವನದ ಬಳಿ ದೀಪ ಹಚ್ಚಿದರೆ ಪುತ್ರಲಾಭವಾಗುವುದು.

(ಎ) ವಾಯುಸ್ತುತಿಗೆ ಪುರಶ್ಚರಣ ಕ್ರಮವಿದ್ದಂತೆ ಈ ಸ್ತೋತ್ರಕ್ಕೂ ಪುರಶ್ಚರಣ ಕ್ರಮವಿದೆ. ಒಂದೊಂದು ಶ್ಲೋಕಕ್ಕೆ ಒಂದೊಂದು ಫಲವಿದೆ.

೧೦೮ ಸಲ ಪಾರಾಯಣ, ಓಂ ಶ್ರೀ ರಾಘವೇಂದ್ರಾಯ ನಮಃ ಓಂ ಎಂಬ ಅಷ್ಟಾಕ್ಷರ ಮಂತ್ರಜಪ ಇವುಗಳನ್ನೂ ಅದರ ಫಲವನ್ನೂ ಸಹ ಈ ಸ್ತೋತ್ರವೇ ಉಲ್ಲೇಖಿಸಿದೆ.